ಶ್ರೀ ಬಿ.ಆರ್.ಯಾವಗಲ್ : ಮಾನ್ಯ ಸಚಿವರು ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಸೂಕ್ಷ್ಮ ಪ್ರದೇಶವಲ್ಲ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. ಹಲವಾರು ಬಾರಿ ಕೋಮು ಗಲಭೆಗಳು ಆಗಿದೆ ಮತ್ತು ಬೇರೆ ಗಲಾಟೆಗಳೂ ಸಹ ಆಗಿದೆ. ಗದಗ್‌ನಿಂದ ಸುಮಾರು 60 ಕಿ.ಮೀ, ದೂರದಲ್ಲಿದೆ. ಇಡೀ ಜಿಲ್ಲೆಗೆ ಒಂದೇ ಒಂದು ಪೋಲಿಸ್ ಉಪ–ವಿಭಾಗ ಇದೆ. ಇವೆಲ್ಲವನ್ನೂ ಪರಿಗಣನೆ ಮಾಡಿ ಬಹಳ ಅವಶ್ಯಕವಿರುವಂತಹ ಕೆಲಸ. ಪೋಲಿಸ್ ಇಲಾಖೆ ದೃಷ್ಟಿಯಿಂದ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಉಪವಿಭಾಗವನ್ನು ಮಾಡುವ ಬಗ್ಗೆ ಮಾನ್ಯ ಗೃಹ ಸಚಿವರು ಭರವಸೆಯನ್ನು ಕೊಡಬೇಕು.

ಶ್ರೀ ಕೆ.ಜೆ.ಜಾರ್ಜ್ : ಮಾನ್ಯ ಅಧ್ಯಕ್ಷರೆ, ಗದಗ್ ನಲ್ಲಿ ಸುಮಾರು 13 ಪೊಲೀಸ್ ಸ್ಟೇಷನ್‌ಗಳು ಇದೆ. ಈಗ ಅಲ್ಲಿ ಒಂದು ಉಪವಿಭಾಗ ಇದೆ. ಈಗ ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿ ಇನ್ನೊಂದು ಪೊಲೀಸ್ ಉಪವಿಭಾಗ ಮಾಡುವ ಅಗತ್ಯವಿದೆ. ಅದನ್ನು ನರಗುಂದದಲ್ಲಿ ಮಾಡಿಕೊಡುತ್ತೇವೆಂಬ ಬಗ್ಗೆ ಆಶ್ವಾಸನೆಯನ್ನು ಕೊಡುತ್ತೇನೆ.

33(348) ಉಮೇಶ್ ಜಿ. ಜಾಧವ್ (ಚಿಂಚೋಳಿ)

(ಮಾನ್ಯ ಸದಸ್ಯರು ಗೈರು ಹಾಜರಿದ್ದರು)

ಅಧ್ಯಕ್ಷರು: ಶ್ರೀ ಬಿ.ಎನ್.ವಿಜಯಕುಮಾರ್ ಪ್ರಶ್ನೆ ಸಂಖ್ಯೆ:34(683) ಇದ್ದು ಮಾನ್ಯ ಚಲುವರಾಯಸ್ವಾಮಿಯವರೆ ಮೆಟ್ರೋಗೆ ಸಂಬಂಧಿಸಿದಂತೆ ಪ್ರಶ್ನೆ ಸಂಖ್ಯೆ:35(669) ನಿಮ್ಮದು ಸಹ ಪ್ರಶ್ನೆ ಇದೆ. ಎರಡೂ ಪ್ರಶ್ನೆಗಳು ಹೆಚ್ಚು ಕಡಿಮೆ ಒಂದೇ ಆಗಿದೆ. ತಾವು ಕೇಳಿ. ಈಗ ತಾವು ಒಂದು ಕೆಲಸಮಾಡಿ. ಇದನ್ನು ಸ್ವಲ್ಪ ಚರ್ಚೆಯ ರೂಪದಲ್ಲಿ ಹಾಕಿದರೆ ಅದಕ್ಕೆ ಸವಿಸ್ತಾರವಾಗಿ ಉತ್ತರವನ್ನು ಹೇಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಸದ್ಯಕ್ಕೆ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇವೆ.

ಅಧ್ಯಕ್ಷರು: ಈ ಬಗ್ಗೆ ಸದನದಲ್ಲಿ ಪೂರ್ಣ ಉತ್ತರವನ್ನು ಕೊಡುವುದಕ್ಕೂ ಆಗುವುದಿಲ್ಲ. ಉತ್ತರವನ್ನು ಕೊಟ್ಟರೂ ಸಹ ನಿಮಗೆ ಸಮಾಧಾನವು ಆಗುವುದಿಲ್ಲ.

ಶ್ರೀ ಎನ್.ಚಲುವರಾಯ ಸ್ವಾಮಿ: ಈ ಬಗ್ಗೆ ನಾಳೆ ಮತ್ತು ನಾಡಿದ್ದರಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಈ ಬಗ್ಗೆ ಮುಂದಿನ ಅಧಿವೇಶನದಲ್ಲಿ ಹಾಕಿಕೊಳ್ಳಲಿ. ಸದ್ಯಕ್ಕೆ ನಾವು ಈ ಬಗ್ಗೆ simple ಆಗಿ ಕೇಳಿರುತ್ತೇವೆ. ಅದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಕೊಡಲಿ. ಈ ಬಗ್ಗೆ ಸದ್ಯಕ್ಕೆ ಸರ್ಕಾರದ ಗಮನಕ್ಕೆ ಹೋಗುತ್ತದೆ. ಮುಂದಿನ ದಿನಗಳಲ್ಲಿ ನೀವು ಮತ್ತೊಂದು ಸಾರಿ ಅದಿವೇಶನ ಕರೆದಾಗ ಈ ಬಗ್ಗೆ ಹಾಕಿಕೊಳ್ಳಲಿ.

ಅಧ್ಯಕ್ಷರು: ಆಯಿತು. ನೀವಿಬ್ಬರು ಒಬ್ಬರಾದ ಮೇಲೆ ಒಬ್ಬರು ಪ್ರಶ್ನೆಯನ್ನು ಕೇಳಿ.

ಬೆಂಗಳೂರು ಮೆಟ್ರೋ ಯೋಜನೆ ಕಾಮಗಾರಿ ಪ್ರಗತಿ

34(683) Sri Vijaya kumar.B.N (ಜಯನಗರ)

a) What is the progress/ stage of Bangalore City Metro Project; When did Reach -2, Reach-3 and Reach-4 routes will be completed;

b) Whether it is true that the period stipulated earlier is ended, if so, what are the reasons for delay in work; which are the Metro Rail Routes opened for travelling;